**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.531/2025**

**CW- 3** **PW:3**

| | |
|---|---|
| ಸಾಕ್ಷಿಯ ಹೆಸರು | ಃ ಕಾಳಿಂಗರಾಜ ಅಂಬೊರೆ |
| ತಂದೆ /ಗಂಡನ ಹೆಸರು | ಃ ನಾಗರಾಜ |
| ವಯಸ್ಸು | ಃ 46 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ |
| ವಾಸಸ್ಥಳ | ಃ ಗೊಕುಲ ರೋಡ, ಹುಬ್ಬಳ್ಳಿ |

ದಿಃ **02.07.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ತೋರಿದ ನಿಪಿ.4 ಮತ್ತು 5 ರಲ್ಲಿ ನನ್ನ ಸಹಿಗಳು ಇದ್ದು ಅವನ್ನು ನೋಡಿ ಗುರುತಿಸುತ್ತಿದ್ದು ನನ್ನ ಸಹಿಗಳನ್ನು ನಿಪಿ.4(ಸಿ) ಹಾಗೂ ನಿಪಿ.5(ಸಿ) ಎಂದು ಗುರುತಿಸಲಾಯಿತು. ನಿಪಿ.4 ಮತ್ತು 5 ಕ್ಕೆ ಯಾವ ದಿನಾಂಕ, ಸ್ಥಳದಲ್ಲಿ ಮತ್ತು ಸಮಯದಲ್ಲಿ ಸಹಿ ಮಾಡಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎನ್ನುವುದು ನೆನಪಿಲ್ಲ. ನಿಪಿ.4 ರಲ್ಲಿ ಏನು ಬರೆದಿದೆ ಎನ್ನುವುದು ಗೊತ್ತಿಲ್ಲ. ನನಗೆ ತೊರಿದ ನಿಪಿ.6 ರಲ್ಲಿ ನಾನು ಇದ್ದೇನೆ. ಯಾವ ದಿನಾಂಕದಂದು ಏನು ಕಾರಣಕ್ಕೆ ಈ ಫೋಟೊ ತೆಗೆದಿದ್ದಾರೆ ಎನ್ನುವುದು ಗೊತ್ತಿಲ್ಲ. ಸ್ಥಳವನ್ನು ಯಾರು ತೋರಿಸಿದರು ಎನ್ನುವುದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 27.09.2024 ರಂದು ನನ್ನ ಮತ್ತು ಚಾಸಾಃ 2 ರವರ ಸಮಕ್ಷಮ ನವನಗರದ ರಾಯಲ್ ರಿಜ್ ಹೊಟೆಲ್ ಹತ್ತಿರ ಚಾಸಾಃ 1 ರವರು ತೊರಿಸಿದ ಸ್ಥಳದಲ್ಲಿ ನಿಪಿ.4 ರಂತೆ

ಪಂಚನಾಮೆಯನ್ನು ಮುಂಜಾನೆ 10.10 ನಿಮಿಷದಿಂದ 11 ಗಂಟೆಯವರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರ ಸಮಯದಲ್ಲಿ ನಿಪಿ.5 ರಂತೆ ನಕಾಶೆಯನ್ನು ತೆಗೆದು ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.6 ಫೋಟೋವನ್ನು ನಿಪಿ.4 ಮತ್ತು 5 ರ ಸಮಯದಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.4 ರಿಂದ 6 ರಲ್ಲಿನ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.